ದಿಃ 16.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಜಿ.ಬಿ.ವಿ ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 15.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಜಿ.ಬಿ.ವಿ. ವಕೀಲರಿಂದ ವಾದಿ ಪರವಾಗಿ

2. ಕಳಸ ಗ್ರಾಮ ಪಂಚಾಯ್ತಿಯಿಂದ ನೀಡಿರುವ Transfer by sale certificate ನ್ನು ಹಾಜರು ಮಾಡಿದ್ದು ನಿಪಿ-1 ಎಂದು ಗುರುತಿಸಲಾಯಿತು. ದಿನಾಂಕ 07.02.1986 ರನೇ ಇಸವಿಯ ಕ್ರಯಪತ್ರವನ್ನು ಹಾಜರು ಮಾಡಿದ್ದು ನಿಪಿ-2 ಎಂದು ಗುರುತಿಸಲಾಯಿತು. ದಿನಾಂಕ 14.05.2016 ರಂದು ತಹಶೀಲ್ದಾರ್ ಹಾಗೂ ಇತರರಿಗೆ ನೀಡಿರುವ ನೋಟೀಸಿನ ಪ್ರತಿಯನ್ನು ಹಾಜರು ಮಾಡಿದ್ದು ನಿಪಿ-3 ಎಂದು ಗುರುತಿಸಲಾಯಿತು. ದಿನಾಂಕ 08.05.2018 ರಂದು ಕಳಸ ಗ್ರಾಮ ಪಂಚಾಯ್ತಿಗೆ ನೀಡಿರುವ ನೋಟೀಸಿನ ಪ್ರತಿಯನ್ನು ಹಾಜರು ಮಾಡಿದ್ದು ನಿಪಿ-4 ಎಂದು ಗುರುತಿಸಲಾಯಿತು.
3. ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲು ಶ್ರೀ ಹೆಚ್.ಬಿ.ಎಸ್. ವಕೀಲರಿಂದ ಪ್ರತಿವಾದಿ ಪರವಾಗಿ

4. ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗೆ ಮೂಂದೂಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ದಿಃ 06.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀಮತಿ ಎಂ.ಎಸ್.ಆರ್. ವಕೀಲರಿಂದ ಪ್ರತಿವಾದಿ ಪರವಾಗಿ

5. ನಾನು 7 ನೇ ತರಗತಿ ವರೆಗೆ ಕಲಿತಿದ್ದೇನೆ. ನಾನು ಬಂಗಾರ ಬೆಳ್ಳಿ ಕೆಲಸ ಮಾಡುತ್ತೇನೆ. ನಾನು ಕರ್ನಾಟಕ ಬ್ಯಾಂಕಿನ appraiser ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಕರ್ನಾಟಕ ಬ್ಯಾಂಕಿನ appraiser ಆಗಿ ಕೆಲಸ ಮಾಡುವ ಮೊದಲು ಆ ಬ್ಯಾಂಕಿನಲ್ಲಿ ಪ್ರತಿವಾದಿಗಳ ತಂದೆ ಗಣೇಶ್ ಭಗವಂತ್ ಶೇಟ್ ರವರು ಆ ಬ್ಯಾಂಕಿನಲ್ಲಿ appraiser ಆಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ದಾಖಲಿಸಲು ಸತೀಶ್ ಪ್ರಭು ಎಂಬುವವರು ನೀಡಿದ್ದರು. ಈ ದಾವೆಯನ್ನು ದಾಖಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿದ್ದೇನೆ. ಈ ಕೇಸಿನಲ್ಲಿ ಮೊದಲು ನಾನು ಪ್ರತಿವಾದಿ ಆಗಿದ್ದೆ ಎಂದರೆ ಸರಿ. ನಾನು ಪ್ರತಿವಾದಿಯಾಗಿದ್ದಾಗ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ದಾವ ಸ್ವತ್ತಿನ ಪೂರ್ವಕ್ಕೆ ಸರ್ವೆ ನಂಬರ್ 433, ಉತ್ತರಕ್ಕೆ ಆಸ್ಪತ್ರೆಯ ವಸತಿ ಗೃಹ ಜಾಗ, ಪಶ್ಚಿಮಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಬೇರೆಯವರ ಜಾಗ ಬರುತ್ತದೆ. ದಾವ ಸ್ವತ್ತಿನ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ. ದಾವ ಸ್ವತ್ತಿನ ವಿಸ್ತೀರ್ಣ 16 ½ x 110 ಇರುತ್ತದೆ.

6. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರ ನನಗೆ ಗೊತ್ತು. ನಾನು ನ್ಯಾಯಾಲಯದಲ್ಲಿ ಗುರುತಿಸಿರುವ ದಾಖಲೆಯ ವಿಚಾರ ನನಗೆ ಗೊತ್ತು. ಈ ದಾವೆಯಲ್ಲಿ ಕೇಳಿರುವ ಪರಿಹಾರಗಳ ಬಗ್ಗೆ ನನಗೆ ಗೊತ್ತು. ನಮ್ಮ ತಂದೆಯ ಜಾಗ ನಮಗೆ ಬಿಟ್ಟು ಕೊಡಿ ಎಂದು ಪರಿಹಾರ ಕೇಳಿದ್ದೇನೆ. ಬೇರೆ ಪರಿಹಾರವನ್ನು ಈ ದಾವೆಯಲ್ಲಿ ಕೇಳಿಲ್ಲ. ಪ್ರತಿವಾದಿಯ ತಂದೆ ಗಣೇಶ್ ಭಗವಂತ್ ಶೇಟ್ ಮತ್ತು ನಮ್ಮ ತಂದೆ ಶ್ರೀಧರ ಶೇಟ್ ರವರು ಅಣ್ಣ ತಮ್ಮಂದಿರು ಎಂದರೆ ಸರಿ. ನಮ್ಮ ತಂದೆಗೆ ನಾವು 6 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತೇವೆ. ಹೆಣ್ಣು ಮಕ್ಕಳ

ಹೆಸರು ಮೊಹಿನಿ ಮತ್ತು ಪ್ರೇಮ. ಪ್ರತಿವಾದಿಗಳ ತಂದೆ ಗಣೇಶ್ ಭಗವಂತ್ ಶೇಟ್ ರವರಿಗೆ 3 ಜನ ಗಂಡು ಮತ್ತು 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ನಮ್ಮ ತಂದೆ ಮರಣ ಹೊಂದುವಾಗ ನಮಗೆ 15 ರಿಂದ 16 ವರ್ಷ ಪ್ರಾಯ ಆಗಿತ್ತು.

7. ನಮ್ಮ ತಂದೆ ಶ್ರೀಧರ್ ಭಗವಾನ್ ಶೇಟ್ ಮತ್ತು ರಾಮಕೃಷ್ಣ ನಾರಾಯಣ ಶೇಟ್ ರವರು ಜಂಟಿಯಾಗಿ ಪಂಚಾಯಿತಿಯ ಹರಾಜಿನಲ್ಲಿ ಖರೀದಿಸಿದ ಸ್ವತ್ತಿನ ವಿಸ್ತೀರ್ಣ 33 x 110. ಯಾವ ದಿನಾಂಕದಂದು ಹರಾಜಿನಲ್ಲಿ ಆ ಆಸ್ತಿಯನ್ನು ಖರೀದಿಸಿದ್ದರು ಎಂದರೆ ಸಾಕ್ಷಿ 1968-69 ರಲ್ಲಿ ರೂ.5300 ಚಿಲ್ಲರೆ ಹಣಕ್ಕೆ ಖರೀದಿಸಿದ್ದರು. ನನ್ನ ತಂದೆ 1977 ರಲ್ಲಿ ಮೃತಪಟ್ಟಿದ್ದರು. 1969 ರಿಂದ 1977 ರವರೆಗೂ ಆ ಆಸ್ತಿ ನನ್ನ ತಂದೆ ಮತ್ತು ರಾಮಕೃಷ್ಣ ನಾರಾಯಣ ಶೇಟ್ ರವರು ಹೆಸರಿನಲ್ಲಿ ಜಂಟಿಯಾಗಿ ಇತ್ತು ಎಂದರೆ ಸರಿ. ಆ ಅವಧಿಯಲ್ಲಿ ಅವರ ಇಬ್ಬರ ಹೆಸರಿನಲ್ಲಿ ಜಂಟಿಯಾಗಿ ಖಾತೆ ಇತ್ತು ಎಂಬ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ.

8. 1977 ರಲ್ಲಿ ನಾನು minor ಆಗಿದ್ದ ಕಾರಣ ಗಣೇಶ್ ಭಗವಂತ್ ಶೇಟ್ ರವರ ಹೆಸರಿನಲ್ಲಿ ಆ ಆಸ್ತಿಯ ಖಾತೆಯನ್ನು ಮಾಡಿಸಿದ್ದರು ಎಂದರೆ ಸರಿಯಲ್ಲ. ಗಣೇಶ್ ಭಗವಂತ್ ಶೇಟ್ ರವರು ನಮ್ಮ ತಂದೆಯ ಹೆಸರಿನಲ್ಲಿ ಇದ್ದ ಆಸ್ತಿಯನ್ನು ಯಾವ ಇಸವಿಯಲ್ಲಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರು ಎಂದು ನಾನು ಸಣ್ಣವನಿದ್ದ ಕಾರಣ ನನಗೆ ಗೊತ್ತಿಲ್ಲ.

9. ನಾನು ಪ್ರಾಪ್ತ ವಯಸ್ಸಿಗೆ ಬಂದ ಬಳಿಕ ನಾನು ಮತ್ತು ರಾಮಕೃಷ್ಣ ನಾರಾಯಣ ಶೇಟ್ ರವರು ಅಹಮದ್ ಎಂಬುವವರಿಗೆ ಆ ಆಸ್ತಿಯ ಅರ್ಧ ಭಾಗವನ್ನು ಮಾರಾಟ ಮಾಡಿದ್ದೇವೆ ಎಂದರೆ ಸಾಕ್ಷಿ ನಾವು ಮಾರಾಟ ಮಾಡಿಲ್ಲ, ರಾಮಕೃಷ್ಣ ನಾರಾಯಣ ಶೇಟ್ ರವರು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಅಹಮದ್ ರವರಿಗೆ ಮಾರಾಟ ಮಾಡಿದ ಆಸ್ತಿಯ ಕ್ರಯ ಪತ್ರಕ್ಕೆ ನಾನು ಮತ್ತು ನನ್ನ ಸಹೋದರರು ಸಹಿ

ಮಾಡಿದ್ದು ನನಗೆ ನೆನಪಿಲ್ಲ. ಆ ಕ್ರಯ ಪತ್ರಕ್ಕೆ ಯಾರೆಲ್ಲ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಹಮದ್ ರವರಿಗೆ ಮಾರಾಟ ಮಾಡಿದ ಜಾಗದ ಪೂರ್ವಕ್ಕೆ ಸರ್ವೆ ನಂಬರ್ 433, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸರ್ಕಾರಿ ಆಸ್ಪತ್ರೆಯ ವಸತಿ ಗೃಹ ಮತ್ತು ದಕ್ಷಿಣಕ್ಕೆ ಅಹಮದ್ ರವರ ಜಾಗ ಬರುತ್ತದೆ. ನಿ.ಪಿ.3 ವಕೀಲರ ನೋಟೀಸಿಗೆ ಮಾಹಿತಿಯನ್ನು ನಾನು ನೀಡಿದ್ದೇನೆ. ನಿ.ಪಿ.3 ನೋಟೀಸನ್ನು ಸಾಕ್ಷಿಗೆ ತೋರಿಸಿ 2 ನೇ ಪುಟದಲ್ಲಿ "ಅರ್ಧ ನಿವೇಶನವನ್ನು ಕೆ. ಅಹಮದ್ ರವರಿಗೆ ಮಾರಾಟ ಮಾಡಿದ್ದರು. ಸದರಿ ಪತ್ರಕ್ಕೆ ಶ್ರೀಧರ ಭಗವಂತ್ ಶೇಟ್ ರವರ ಸಹೋದರರಾದ ಗಣೇಶ್ ಭಗವಂತ್ ಶೇಟ್ ರವರು ಸಾಕ್ಷಿ ಹಾಕಿರುತ್ತಾರೆ ಎಂದು ಬರೆಯಲಾಗಿದೆ" ಎಂದು ಕೇಳಲಾಗಿ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ನಿರಾಕರಿಸಿದ್ದರಿಂದ ಸದರಿ ಸಮಂಜಸ ಭಾಗವನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ನಿ.ಪಿ.2 ಅನ್ನು ನಾವು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ ಎಂದರೆ ಸರಿ. ನಿ.ಪಿ.2 ಕ್ರಯ ಪತ್ರದಲ್ಲಿ ನಾನು ಸಹ ಮಾರಾಟಗಾರನಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ. ನಿ.ಪಿ.2 ಕ್ರಯ ಪತ್ರಕ್ಕೆ ಗಣೇಶ ಭಗವಂತ್ ಶೇಟ್ ರವರ ಸಹಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.2 ಕ್ರಯ ಪತ್ರವನ್ನು ತಯಾರಿಸಲು ಮಾಹಿತಿಯನ್ನು ನೀವು ನೀಡಿದ್ದೀರಿ ಎಂದರೆ ಸಾಕ್ಷಿ ಅವರೇ ಬರೆದಿದ್ದಾರೆ ಎಂದು ನುಡಿಯುತ್ತಾರೆ. ನಿ.ಪಿ.2 ಕ್ರಯ ಪತ್ರ ಆಗುವ ಸಮಯದಲ್ಲಿ ನನಗೆ 15 ರಿಂದ 16 ಪ್ರಾಯ ಆಗಿತ್ತು. ನಿ.ಪಿ.2 ರಲ್ಲಿ ಬರೆದಿರುವ ವಿಚಾರವನ್ನು ಯಾರು ಬರೆಸಿದ್ದರು ಎಂದು ನನಗೆ ಮಾಹಿತಿ ಇಲ್ಲ.

10. ನಮ್ಮ ತಂದೆ ಶ್ರೀಧರ ಭಗವಂತ್ ಶೇಟ್ ಮತ್ತು ಪ್ರತಿವಾದಿಯ ತಂದೆ ಗಣೇಶ್ ಭಗವಂತ್ ಶೇಟ್ ಬದುಕಿದ್ದಾಗ ಅವರ ಒಟ್ಟಿಗೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರ ತಂದೆ ಗಣೇಶ್ ಭಗವಂತ್ ಶೇಟ್ ರವರು 2000 ದಲ್ಲಿ ಮೃತಪಟ್ಟಿದ್ದರು. ಪ್ರತಿವಾದಿಯರ ತಂದೆ ಗಣೇಶ್ ಭಗವಂತ್ ಶೇಟ್ ರವರು ಮೃತಪಟ್ಟಾಗ ನನಗೆ 22 ರಿಂದ 23

ವರ್ಷ ಆಗಿತ್ತು. ನಾನು ಪ್ರಾಪ್ತ ವಯಸ್ಸಿಗೆ ಬಂದ ಬಳಿಕ ಪ್ರತಿವಾದಿಯರ ತಂದೆ ಗಣೇಶ್ ಭಗವಂತ್ ಶೇಟ್ ತಮ್ಮ ಹೆಸರಿಗೆ ಮಾಡಿಕೊಟ್ಟ ಆಸ್ತಿಯನ್ನು ನನಗೆ ಕೊಡುವಂತೆ ನಿಮಗೆ ಕೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾನು ಕೇಳಿದ್ದೆ, ಅವರು ಕೊಡುತ್ತೇನೆ ಎಂದು ತುಂಬಾ ಸಲ ಹೇಳಿದ್ದರು ಎಂದು ನುಡಿಯುತ್ತಾರೆ. ಗಣೇಶ್ ಭಗವಂತ್ ಶೇಟ್ ರವರು ಆಸ್ತಿಯನ್ನು ಕೊಡದೇ ಇದ್ದಾಗ ಅವರ ಮೇಲೆ ಕೇಸನ್ನು ದಾಖಲಿಸಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ಅವರು ಕೊಡುತ್ತೇನೆ ಎಂದು ಹೇಳಿದ ಕಾರಣ ಕೇಸನ್ನು ದಾಖಲಿಸಿಲ್ಲ ಎಂದು ನುಡಿಯುತ್ತಾರೆ. ಗಣೇಶ್ ಭಗವಂತ್ ಶೇಟ್ ರವರು ಮೃತಪಟ್ಟ ಬಳಿಕವೇ ಪ್ರತಿವಾದಿಗಳ ಬಳಿ ಆಸ್ತಿಯನ್ನು ನೀಡುವಂತೆ ಕೇಳಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ಕೇಳಲು ಹೋದಾಗ ಅವರು ನಮ್ಮ ಅಪ್ಪನ ಆಸ್ತಿ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ನೋಟೀಸನ್ನು 2022-2023 ಇಸವಿಯಲ್ಲಿ ನೀಡಿರುತ್ತೇನೆ.

11. ನನ್ನ ತಂದೆ ಮತ್ತು ಪ್ರತಿವಾದಿಯರ ತಂದೆ ಒಂದೇ ಮನೆಯಲ್ಲಿ ಇದ್ದು ಒಟ್ಟಿಗೆ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಳ್ಳುವವರೆಗೂ ನನ್ನ ತಂದೆ ಮತ್ತು ಪ್ರತಿವಾದಿಯರ ತಂದೆ ಒಟ್ಟಿಗೆ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆದಾಯದಿಂದ ನಮ್ಮ ತಂದೆಯ ಹೆಸರಿನಲ್ಲಿ ಹರಾಜಿನಲ್ಲಿ ಆಸ್ತಿಯನ್ನು ಖರೀದಿಸಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಮ್ಮ ತಂದೆ ಸ್ವತಃ ಖರೀದಿಸಿದ್ದರು ಎಂದು ನುಡಿಯುತ್ತಾರೆ. ಹರಾಜಿನಲ್ಲಿ ಖರೀದಿಸಿದ್ದ ಆಸ್ತಿಯನ್ನು ನಮ್ಮ ತಂದೆ ಮತ್ತು ಪ್ರತಿವಾದಿಯರ ತಂದೆ ಬಾಯಿ ಮಾತಿನ ಮೂಲಕ ಅರ್ಧ ಹಿಸ್ಸೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಬಾಯಿ ಮಾತಿನ ಮೂಲಕ ಮಾಡಿಕೊಂಡ ಅರ್ಧ ಹಿಸ್ಸೆ ಭಾಗವನ್ನು ನಾವುಗಳು ಅಹಮದ್ ರವರಿಗೆ ಮಾರಾಟ ಮಾಡಿದ್ದೆವು ಎಂದರೆ ಸಾಕ್ಷಿ ನಾರಾಯಣ ಶೇಟ್ ರವರ ಜಾಗವನ್ನು ಮಾರಾಟ ಮಾಡಿದ್ದರು, ನಮ್ಮ ಜಾಗವನ್ನು ಹಾಗೆಯೇ ಉಳಿಸಿಕೊಂಡಿದ್ದೇವೆ ಎಂದು ನುಡಿಯುತ್ತಾರೆ.

ಅಹಮದ್ ರವರಿಗೆ ಜಾಗವನ್ನು ನಾವೇ ಪುನಃ ಖರೀದಿಸಿದ್ದೆವು ಎಂದರೆ ಸರಿ. ಅಹಮದ್ ರವರಿಗೆ ಮಾರಾಟ ಮಾಡಿದ ಎಷ್ಟು ದಿನಗಳ ಬಳಿಕ ಆ ಆಸ್ತಿಯನ್ನು ಪುನಃ ಖರೀದಿಸಿದ್ದೆವು ಎಂದು ನನಗೆ ಈಗ ನೆನಪಿಲ್ಲ. ಶ್ರೀಧರ ಭಗವಂತ್ ಶೇಟ್ ಮತ್ತು ಗಣೇಶ್ ಭಗವಂತ್ ಶೇಟ್ ಪಾಲು ಮಾಡಿಕೊಂಡ ಬಗ್ಗೆ ಪತ್ರದಲ್ಲಿ ಬರೆದು ಇಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಪತ್ರ ನನ್ನ ಬಳಿಯೇ ಇದೆ ಎಂದರೆ ಸರಿಯಲ್ಲ. ಆ ಕಾರಣದಿಂದಲೇ ಗಣೇಶ್ ಭಗವಂತ್ ಶೇಟ್ ರವರು ಬದುಕಿದ್ದಾಗ ನಾವು ಆಸ್ತಿಯಲ್ಲಿ ಪಾಲನ್ನು ಕೇಳಲಿಲ್ಲ ಎಂದರೆ ಸರಿಯಲ್ಲ. ನಮ್ಮ ಹಿಸ್ಸೆಗೆ ಬಂದ ಅರ್ಧ ಭಾಗವನ್ನು ಈಗಾಗಲೇ ಮಾರಾಟ ಮಾಡಿ ಪ್ರತಿವಾದಿಗಳ ಹಿಸ್ಸೆಗೆ ಬಂದ ಅರ್ಧ ಭಾಗವನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡಲು ಈ ದಾವೆಯನ್ನು ತಂದಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲಃ</u>

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

Sd/-
ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ